JULY 26, 2025

**AKASHAVANI - DHARWAD**

**PRADESH SAMACHARA (KANNADA) 7.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

- **ಇಂದು ಕಾರ್ಗಿಲ್ ವಿಜಯ ದಿನ; ವಿವಿಧೆಡೆ ವೀರ ಸೈನಿಕರ ತ್ಯಾಗ, ಬಲಿದಾನ ಸ್ಮರಣೆ ಹಾಗೂ ಗೌರವಾರ್ಪಣೆ.**
- **ರಾಜ್ಯದ ಸಫಾಯಿ ಕರ್ಮಚಾರಿಗಳ ವಿಶ್ರಾಂತಿಗಾಗಿ, ಒರಿಸ್ಸಾ ಅಥವಾ ಸಿಂಗಾಪುರ ಮಾದರಿಯ, ವಿಶ್ರಾಂತಿ ಗೃಹ.**
- **ಮತ್ಸ್ಯ ಸಂಜೀವಿನಿ ಯೋಜನೆ: ಗ್ರಾಮೀಣ ಮಹಿಳೆಯರ ಸ್ವಾವಲಂಬನೆಗೆ ಆಧಾರ.**
- **ಮನ್ ಕಿ ಬಾತ್; ನಾಳೆ 11 ಗಂಟೆಗೆ, ದೇಶದ ಜನತೆಯನ್ನುದ್ದೇಶಿಸಿ, ಪ್ರಧಾನಮಂತ್ರಿ ಭಾಷಣ**

<><><>

**ಈಗ ವಾರ್ತೆಗಳ ವಿವರ**

<><><>

**ಇಂದು, ಕಾರ್ಗಿಲ್ ವಿಜಯೋತ್ಸವ ದಿನ. ಭಾರತೀಯ ಯೋಧರು, ಜಮ್ಮು, ಕಾಶ್ಮೀರದ, ಕಾರ್ಗಿಲ್ ಪರ್ವತ ಶ್ರೇಣಿಯಲ್ಲಿ ಪಾಕಿಸ್ಥಾನದ ಸೈನಿಕರನ್ನು, ಭಾರತದ ನೆಲದಿಂದ ಹಿಮ್ಮೆಟ್ಟಿಸಿ, ಜಯಭೇರಿ ಸಾಧಿಸಿದ, ದಿನ. ಭಾರತೀಯ ಸೈನಿಕರ ಶೌರ್ಯ, ಪರಾಕ್ರಮ, ತ್ಯಾಗ ಹಾಗೂ ಬಲಿದಾನಗಳನ್ನು ಇಂದು ನಾಡಿನಾದ್ಯಂತ ಅಭಿಮಾನದಿಂದ ಸ್ಮರಿಸಲಾಗುತ್ತಿದೆ. ಕಾರ್ಗಿಲ್ ಯುದ್ಧ ಸಂದರ್ಭದಲ್ಲಿ, ಹುತಾತ್ಮರಾದ ವೀರಯೋಧರ ಪಾರ್ಥಿವ ಶರೀರಗಳನ್ನು, ಅವರ ಸ್ವಗ್ರಾಮಗಳಿಗೆ ಸಕಲ ಸರ್ಕಾರಿ ಗೌರವಗಳೊಂದಿಗೆ ಕಳುಹಿಸಿಕೊಡುವ ಹೊಣೆ ಹೊತ್ತಿದ್ದು, ಕಾಸರಗೋಡು ಜಿಲ್ಲೆ ಹೊಸದುರ್ಗದವರಾದ, ಪ್ರಸ್ತುತ ಹೊಸ ದಿಲ್ಲಿ ನಿವಾಸಿ, ಕರ್ನಲ್ ಅಶೋಕ ಕಿಣಿ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನುಭವ ಹಂಚಿಕೊಂಡಿದ್ದಾರೆ.**

<><><>

**ಧ್ವನಿ: ಕರ್ನಲ್ ಅಶೋಕ ಕಿಣಿ 70 ಸೆಕೆಂದುಗಳು**

<><><>

ಕಾರ್ಗಿಲ್ ವಿಜಯ ದಿನದ ಹಿನ್ನೆಲೆ, ಇಂದು ಬೆಳಗ್ಗೆ 10 ಗಂಟೆಗೆ, ಕಾರ್ಗಿಲ್ ವಿಜಯ ಸ್ಥೂಪದಲ್ಲಿ, ಹುತಾತ್ಮ ಯೋಧರಿಗೆ ಗೌರವ ನಮನ ಸಲ್ಲಿಸಲಾಗುತ್ತಿದೆ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡದ ಹಿರಿಯ ಸಾಮಾಜಿಕ ಕಾರ್ಯಕರ್ತ, ಉದಯ ಯಂಡಿಗೇರಿ.

<><><>

ಧ್ವನಿ: ಉದಯ ಯಂಡಿಗೇರಿ 45 ಸೆಕೆಂದುಗಳು

<><><>

ಬೆಂಗಳೂರು ಚೌಡಯ್ಯ ರಸ್ತೆಯ, ರಾಷ್ಟ್ರೀಯ ಮಿಲಿಟರಿ ಸ್ಮಾರಕದಲ್ಲಿ, ಇಂದು ಬೆಳಗ್ಗೆ 9.30ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ವೀರಗಲ್ಲು ಲೋಕಾರ್ಪಣೆ ಹಾಗೂ ಕಾರ್ಗಿಲ್ ವಿಜಯ ದಿನದ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಅಧಿಕಾರಿಗಳು, ವಿಶೇಷ ಆಹ್ವಾನಿತ ಸೇನಾಧಿಕಾರಿಗಳು, ಸಾರ್ವಜನಿಕರು ಪಾಲ್ಗೊಂಡು, ವೀರ ಸೇನಾನಿಗಳಿಗೆ ಗೌರವ ಅರ್ಪಿಸಲಿದ್ದಾರೆ.

<><><>

ಒರಿಸ್ಸಾ ಅಥವಾ ಸಿಂಗಾಪುರ ವಿನ್ಯಾಸ ಮಾದರಿಯ, ವಿಶ್ರಾಂತಿ ಗೃಹಗಳನ್ನು, ರಾಜ್ಯದ ಸಫಾಯಿ ಕರ್ಮಚಾರಿಗಳಿಗಾಗಿ, ಸದ್ಯದಲ್ಲೇ ಅಂತಿಮ ಗೊಳಿಸಲಾಗುವುದು ಎಂದು, ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಕಾರ್ಯದರ್ಶಿ ಚಂದ್ರಕಲಾ ತಿಳಿಸಿದ್ದಾರೆ. ಬಳ್ಳಾರಿಯಲ್ಲಿ, ಸಫಾಯಿ ಕರ್ಮಚಾರಿಗಳ ಜಾಗೃತಿ ಸಮಿತಿಯ, ಪ್ರಗತಿ ಪರಿಶೀಲನೆ ನಡೆಸಿ, ಅವರು ಮಾತನಾಡಿದರು. ಗುತ್ತಿಗೆ ಪಡೆದಿರುವ, ಖಾಸಗಿ ಏಜೆನ್ಸಿಗಳು, ಪೌರ ಕಾರ್ಮಿಕರಿಗೆ ಅಗತ್ಯವಾದ, ಸಮವಸ್ತ್ರ, ಗಮ್ ಬೂಟ್, ಕೈಗವಸು, ಮಾಸ್ಕ್ ಸೇರಿದಂತೆ, ಎಲ್ಲ ಅವಶ್ಯಕ ಸುರಕ್ಷಾ ಪರಿಕರಗಳನ್ನು, ಒದಗಿಸುವಂತೆ, ಕಟ್ಟುನಿಟ್ಟಾಗಿ ಸೂಚಿಸಿದರು.

<><><>

ಮತ್ಸ್ಯ ಸಂಜೀವಿನಿ ಯೋಜನೆ, ರಾಜ್ಯದಲ್ಲಿ ಹೊಸ ಪ್ರಯೋಗವಾಗಿದೆ; ಮಳೆಗಾಲದ ನಂತರವೂ, ಕೊಪ್ಪಳ ಜಿಲ್ಲೆಯ ಕೆರೆಗಳಲ್ಲಿ, 6 ತಿಂಗಳ ಕಾಲ, ಕೆರೆಯನ್ನು ಗುತ್ತಿಗೆ ಪಡೆದು, ಮೀನು ಕೃಷಿ ಮಾಡಬಹುದಾಗಿದೆ ಎಂದು, ಜಿಲ್ಲಾ ಪಂಚಾಯ್ತಿ ಸಿ.ಇ.ಓ. ವರ್ಣಿತ್ ನೇಗಿ ತಿಳಿಸಿದ್ದಾರೆ. ಜಿಲ್ಲಾ ಪಂಚಾಯಿತಿಯ, ಜೆ.ಎಚ್. ಪಟೇಲ ಸಭಾಂಗಣದಲ್ಲಿ, ಮತ್ಸ್ಯ ಸಂಜೀವಿನಿ ಯೋಜನೆ, ಅರಿವು ಕಾರ್ಯಾಗಾರ ಉದ್ಘಾಟಿಸಿ, ಅವರು ಮಾತನಾಡಿದರು. ಮತ್ಸ್ಯ ಸಂಜೀವಿನಿ ಯೋಜನೆ, ಗ್ರಾಮೀಣ ಮಹಿಳೆಯರು ಹಾಗೂ ಮಹಿಳಾ ಸ್ವ ಸಹಾಯ ಸಂಘಗಳ, ಆರ್ಥಿಕ ಬಲವರ್ಧನೆಗೆ ಸಹಕಾರಿಯಾಗಲಿದೆ ಎಂದರು.

<><><>

ಮಹಾದಾಯಿ ನದಿ ನೀರು ಸದ್ಬಳಕೆ ಸೇರಿದಂತೆ, ಅಂತಾರಾಜ್ಯ ನದಿ ನೀರು ಹಂಚಿಕೆ ಸಮಸ್ಯೆಗಳು ಎದುರಾದಾಗ, ರಾಜ್ಯದ ಸಂಸದರು, ಒಂದಾಗಿ ರಾಜ್ಯದ ಹಿತಾಸಕ್ತಿ ಕಾಪಾಡಬೇಕು ಎಂದು, ಜಲ ಸಂಪನ್ಮೂಲ ಖಾತೆ ಸಚಿವ, ಡಿ.ಕೆ. ಶಿವಕುಮಾರ, ಎಕ್ಸ್ ಮಾಧ್ಯಮದಲ್ಲಿ, ಅಭಿಪ್ರಾಯಪಟ್ಟಿದ್ದಾರೆ. ಮಹಾದಾಯಿ, ಕಳಸಾ ಬಂಡೂರಿ ಯೋಜನೆಗಳ ಶೀಘ್ರ ಅನುಷ್ಠಾನಕ್ಕಾಗಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರ ಜಲಶಕ್ತಿ ಖಾತೆ ಸಚಿವ, ಸಿ.ಆರ್. ಪಾಟೀಲ ಅವರನ್ನು ಸದ್ಯದಲ್ಲೇ ನಿಯೋಗದೊಂದಿಗೆ ಭೇಟಿ ಮಾಡಿ, ಮನವಿ ಮಾಡುವುದಾಗಿ, ಸ್ಪಷ್ಟ ಪಡಿಸಿದ್ದಾರೆ.

<><><>

<><><>

ಈಗ ಪ್ರಕಟಣೆ ನಂತರ ಪ್ರದೇಶ ಸಮಾಚಾರ ಮುಂದುವರಿಯುವುದು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ

<><><>

ಕೊಡಗು ಜಿಲ್ಲೆಯ ವಿವಿಧೆಡೆ, ಮಳೆಯಿಂದ ಹಾನಿಗೀಡಾದ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಿದ ಕಂದಾಯ ಖಾತೆ ಸಚಿವ ಕೃಷ್ಣ ಬೈರೇಗೌಡ, ಗುಡ್ಡ ಕುಸಿತದ ಪ್ರದೇಶಗಳಲ್ಲಿ, ಸುರಕ್ಷಿತ ಕಾಂಕ್ರೀಟ್ ತಡೆಗೋಡೆ ನಿರ್ಮಾಣಕ್ಕೆ, 50 ಕೋಟಿ ರೂಪಾಯಿ ಬಿಡುಗಡೆ ಮಾಡಲಾಗುವುದು ಎಂದು, ತಿಳಿಸಿದ್ದಾರೆ.  ಇದೇ ಸಂದರ್ಭದಲ್ಲಿ, ಕೊಡಗಿನ ಪೊನ್ನಂಪೇಟೆ ತೆಹಸೀಲ್ದಾರ ಕಚೇರಿಗೆ ಭೇಟಿ ನೀಡಿ, ದಾಖಲೆಗಳ ಡಿಜಿಟಲೀಕರಣ ಪ್ರಕ್ರಿಯೆ ಪರಿಶೀಲಿಸಿದರು. ಡಿಜಿಟಲೀಕೃತ ಭೂ ದಾಖಲೆಗಳಿಂದ, ಸಾರ್ವಜನಿಕರಿಗೆ 'ಸಕಾಲ'ದಲ್ಲಿ, ನಾಗರಿಕ ಸೇವೆಯನ್ನು ಒದಗಿಸಲು, ಸಾಧ್ಯವಾಗಲಿದೆ ಎಂದರು.

<><><>

ಸತತ ಮಳೆ ಹಿನ್ನೆಲೆ, ಇಂದು, ಉತ್ತರಕನ್ನಡ ಜಿಲ್ಲೆಯ ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ ಹಾಗೂ ಭಟ್ಕಳ ಸೇರಿದಂತೆ, ಐದು ತಾಲೂಕುಗಳ ಅಂಗನವಾಡಿ, ಶಾಲೆ, ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ಹಾಸನ ಜಿಲ್ಲೆಯ ಸಕಲೇಶಪುರ, ಬೇಲೂರು ತಾಲೂಕುಗಳ ಅಂಗನವಾಡಿ, ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಿಗೆ ಇಂದು, ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ರಜೆ ಘೋಷಿಸಿದ್ದಾರೆ. ಚಿಕ್ಕಮಗಳೂರು ಜಿಲ್ಲೆ, ಮೂಡಿಗೆರೆ, ಕಳಸ, ಕೊಪ್ಪ, ಶೃಂಗೇರಿ, ಎನ್.ಆರ್.ಪುರ ಹಾಗೂ ಚಿಕ್ಕಮಗಳೂರು ತಾಲೂಕಿನ ಆವತಿ, ಜಾಗರ, ವಸ್ತಾರೆ, ಆಲ್ದೂರು, ಖಾಂಡ್ಯ ಹೋಬಳಿಯ ಅಂಗನವಾಡಿ ಕೇಂದ್ರ, ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಜಿಲ್ಲಾಧಿಕಾರಿ ಮೀನಾ ನಾಗರಾಜ, ಇಂದು ರಜೆ ಘೋಷಿಸಿದ್ದಾರೆ. ಕೊಡಗು ಜಿಲ್ಲೆಯಲ್ಲಿ ಬಿರುಗಾಳಿ ಸಹಿತ ಹೆಚ್ಚಿನ ಮಳೆಯಾಗುತ್ತಿರುವ ಹಿನ್ನೆಲೆ ಇಂದು, ಜಿಲ್ಲೆಯ ಅಂಗನವಾಡಿ, ಪ್ರಾಥಮಿಕ ಹಾಗೂ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ರಜೆ ನೀಡಿ, ಜಿಲ್ಲಾಧಿಕಾರಿ ವೆಂಕಟರಾಜಾ ಆದೇಶಿಸಿದ್ದಾರೆ.

<><><>

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ 136ನೇ ಸಂಸ್ಥಾಪನಾ ದಿನಾಚರಣೆಯ, ಸಮಾರೋಪ ಇಂದು ಸಂಜೆ 5.30ಕ್ಕೆ, ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ, ಜರುಗಲಿದೆ. 'ಕನ್ನಡ ಪ್ರಪಂಚ ಡಾಕ್ಟರ ಪಾಟೀಲ ಪುಟ್ಟಪ್ಪ ಪ್ರಶಸ್ತಿ'ಯನ್ನು, ಬೆಂಗಳೂರಿನ ಹಿರಿಯ ಪತ್ರಕರ್ತ, ಶಾ.ಮಂ. ಕೃಷ್ಣರಾಯ ಅವರಿಗೆ, ಕರ್ನಾಟಕ ವಿಶ್ವವಿದ್ಯಾಲಯದ ಉಪ ಕುಲಪತಿ ಎ.ಎಂ ಖಾನ್ ಪ್ರದಾನಿಸಿ, ಗೌರವಿಸಲಿದ್ದಾರೆ.

<><><>

ಆಕಾಶವಾಣಿಯ, ಬಹುಶ್ರುತ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ನಾಳೆ ಭಾನುವಾರ ಬೆಳಗ್ಗೆ 11 ಗಂಟೆಗೆ, ದೇಶ, ವಿದೇಶಗಳ ಭಾರತೀಯರನ್ನುದ್ದೇಶಿಸಿ ಮಾತನಾಡಲಿದ್ದಾರೆ. ಇದು ಮನದ ಮಾತು ಸರಣಿಯ, 124ನೇ ಆವೃತ್ತಿಯಾಗಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ಇಂದು ಕಾರ್ಗಿಲ್ ವಿಜಯ ದಿನ; ವಿವಿಧೆಡೆ ವೀರ ಸೈನಿಕರ ತ್ಯಾಗ, ಬಲಿದಾನ ಸ್ಮರಣೆ ಹಾಗೂ ಗೌರವಾರ್ಪಣೆ.

ರಾಜ್ಯದ ಸಫಾಯಿ ಕರ್ಮಚಾರಿಗಳ ವಿಶ್ರಾಂತಿಗಾಗಿ, ಒರಿಸ್ಸಾ ಅಥವಾ ಸಿಂಗಾಪುರ ಮಾದರಿಯ, ವಿಶ್ರಾಂತಿ ಗೃಹ.

ಮತ್ಸ್ಯ ಸಂಜೀವಿನಿ ಯೋಜನೆ: ಗ್ರಾಮೀಣ ಮಹಿಳೆಯರ ಸ್ವಾವಲಂಬನೆಗೆ ಆಧಾರ.

ಮನ್ ಕಿ ಬಾತ್; ನಾಳೆ 11 ಗಂಟೆಗೆ, ದೇಶದ ಜನತೆಯನ್ನುದ್ದೇಶಿಸಿ, ಪ್ರಧಾನಮಂತ್ರಿ ಭಾಷಣ

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ

<><><>